(ಗೊಂದಲ)

ಡಾ॥ ಜೀವರಾಜ ಆಳ್ವ ಅವರ ದುಬೈಯ ಭೇಟಿ ಬಗ್ಗೆ ಪ್ರಸ್ತಾಪ.

ಶ್ರೀ ಬಿ. ಲಕ್ಕಪ್ಪ.—ಅಧ್ಯಕ್ಷರೆ, ದುಬೈಗೆ ಡಾ॥ ಜೀವರಾಜ ಆಳ್ವ ಅವರ ಹಠಾತ್ ಭೇಟಿ, ಸೂಟ್‌ಕೇಸ್ ರಹಸ್ಯ, ಕೇಂದ್ರ ತನಿಖೆ, ಇದು ಎಲ್ಲಾ ಪತ್ರಿಕೆಯಲ್ಲಿ ಬಂದಿದೆ. ಕೇಂದ್ರ ಸರ್ಕಾರದ ಅನುಮತಿ ಇಲ್ಲದೆ ಹೋಗಿದ್ದಾರೆ ಎಂಬುದೆಲ್ಲಾ ಇದೆ.

(ಗೊಂದಲ)

ಅಧ್ಯಕ್ಷರು.—ದಯವಮಾಡಿ ಮಾನ್ಯ ಸದಸ್ಯರು ಕುಳಿತುಕೊಳ್ಳಬೇಕು.

(ಗೊಂದಲ)

ಶ್ರೀ ಬಿ. ಲಕ್ಕಪ್ಪ.—ಅಧ್ಯಕ್ಷರೆ, ಅವರು ಈ ಮನೆಯ ಗೌರವಾನ್ವಿತ ಸದಸ್ಯರಿದ್ದಾರೆ.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ.—ಅಧ್ಯಕ್ಷರೆ, ಇದು ಸ್ವಂತ ವ್ಯವಹಾರದ ಪ್ರಶ್ನೆ ಅಲ್ಲ. ಹೊರದೇಶಕ್ಕೆ ಹೋಗಲಿಕ್ಕೆ ಅನುಮತಿಯನ್ನು ಕೇಂದ್ರದವರು ಕೊಟ್ಟಿದ್ದಾರೆಯೇ ? ಏಕೆಂದರೆ ಸೂಟ್‌ಕೇಸ್ ಒಯ್ಯುವ ವಿಚಾರ ಎಲ್ಲಾ ಪ್ರಸ್ತಾಪ ಇರುವುದರಿಂದ ಹೊರದೇಶಕ್ಕೆ ಹೋಗಲಿಕ್ಕೆ ಅವರಿಗೆ ಅನುಮತಿ ಕೊಟ್ಟಿದ್ದಾರೆಯೇ ?

ಅಧ್ಯಕ್ಷರು.—ದಯವಮಾಡಿ ಮಾನ್ಯ ಸದಸ್ಯರು ಕುಳಿತುಕೊಳ್ಳಬೇಕು. ಈಗ ವರದಿಯನ್ನು ಸಭೆಗೆ ಒಪ್ಪಿಸುವುದು.

ವರದಿಯನ್ನು ಒಪ್ಪಿಸುವುದು

ಶ್ರೀ ಬಿ. ಆರ್. ಯಾವಗಲ್ (ಉಪಾಧ್ಯಕ್ಷರು).—ಅಧ್ಯಕ್ಷರೆ, ಖಾಸಗಿ ಸದಸ್ಯರ ವಿಧೇಯಕ ಹಾಗೂ ನಿರ್ಣಯಗಳ ಸಮಿತಿಯ ಹತ್ತನೆಯ ವರದಿಯನ್ನು ಸಭೆಗೆ ಒಪ್ಪಿಸುತ್ತೇನೆ.

ಅಧ್ಯಕ್ಷರು.—ವರದಿಯನ್ನು ಸಭೆಗೆ ಒಪ್ಪಿಸಲಾಗಿದೆ.

(ಗೊಂದಲ)

ಶ್ರೀ ಎಂ. ಎಸ್. ಕೃಷ್ಣನ್. ಅಧ್ಯಕ್ಷರೆ, ಪ್ರಶ್ನೋತ್ತರ ವೇಳೆ ಆದಮೇಲೆ ಅಡ್ಜರ್ನ್‌ಮೆಂಟ್ ಮೋಷನ್ ತೆಗೆದುಕೊಳ್ಳೋಣ ಎಂದು ಹೇಳಿದ್ದಿರಿ.

(ಗೊಂದಲ)

ಶ್ರೀ ಬಿ. ಲಕ್ಕಪ್ಪ.—ಅಧ್ಯಕ್ಷರೆ, ನಾನು ನೋಟೀಸ್ ಕಳುಹಿಸಿದ್ದರ ಬಗ್ಗೆ ತಾವು ಏನೂ ಹೇಳಿಲ್ಲ.

(ಗೊಂದಲ)

ಅಧ್ಯಕ್ಷರು.—ಮಾನ್ಯ ಲಕ್ಕಪ್ಪನವರೇ, ತಾವು ಬಹಳ ಬುದ್ಧಿವಂತ ಪಕ್ಷಿಲರಿದ್ದೀರಿ, ನನಗೆ ಗೊತ್ತಿದೆ, ದಯವಮಾಡಿ ತಾವು ಕುಳಿತುಕೊಳ್ಳಬೇಕು. ಡಾ॥ ಜೀವರಾಜ ಆಳ್ವರವರು ಒಂದು ಪತ್ರ ಬರೆದಿದ್ದಾರೆ. ಅದು ಈ ರೀತಿ ಇದೆ. " Leave of Absence–I may be permitted to be absent from the meetings of the House for about a week's time from today. (This letter was receive on 19th) since I will be out of station." ಇಷ್ಟು ಬರೆದು ಕಳುಹಿಸಿದ್ದಾರೆ. ನೀವು ಅವರ ಬಗ್ಗೆ ನಿಯಮ ೩೫೭ರ ಪ್ರಕಾರ ನೋಟೀಸ್ ಕೊಟ್ಟಿದ್ದೀರಿ.

(ಗೊಂದಲ)

ಶ್ರೀ ಎಂ. ರಘುಪತಿ.—ಅಧ್ಯಕ್ಷರೆ, ಈಗ ನನ್ನದೊಂದು ಕ್ರಿಯಾಲೋಪ ಇದೆ.

(ಗೊಂದಲ)

ಅಧ್ಯಕ್ಷರು.—ದಯವಮಾಡಿ ಮಾನ್ಯ ಸದಸ್ಯರು ಕುಳಿತುಕೊಳ್ಳಬೇಕು. ಅವರು ಈ ಸದನದ ಸದಸ್ಯರು. ಈಗ ಅವರು ಈ ಸದನದಲ್ಲಿ ಇಲ್ಲ. ಅವರು ಈ ಬಗ್ಗೆ ಎಕ್ಸ್‌ಪ್ಲನೇಷನ್ ಕೊಡಬೇಕು. ಆದ್ದರಿಂದ ದಯವಮಾಡಿ ಎಲ್ಲರೂ ಕುಳಿತುಕೊಳ್ಳಬೇಕು.

(ಗೊಂದಲ)

ಅಧ್ಯಕ್ಷರು.—ನಿಯಮ ೩೪೬ರ ಪ್ರಕಾರ ಇದನ್ನು ಅಡ್ಮಿಟ್ ಮಾಡುವುದಕ್ಕಾಗುವುದಿಲ್ಲ. ಏಕೆಂದರೆ, ಅವರು ಈ ಸದನದಲ್ಲಿಲ್ಲ.....

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ.—ಸ್ವಾಮಿ, ಈ ರೀತಿ ಅವರಿಗೆ ಪರ್ಮಿಷನ್ ಕೊಡುವುದಕ್ಕೆ ಬರುವುದಿಲ್ಲ.

(ಗೊಂದಲ)

ಶ್ರೀ ಬಿ. ಲಕ್ಕಪ್ಪ.—ಇದು ನಿಯಮ ೩೪೬ರ ಕೆಳಗೆ ಬರುತ್ತದೆ...

ಶ್ರೀ ಎಂ. ರಘುಪತಿ.—ಅದು ಯಾವಾಗ ಬರುತ್ತದೆ, ನೀವು ಸ್ಪೀಕರ್‌ಗೆ ನೋಟೀಸ್ ಕೊಡಬೇಕು, ಸ್ಪೀಕರ್‌ರವರು ಸದಸ್ಯರಿಗೆ ಹೇಳಬೇಕು...

(ಗೊಂದಲ)

ಅಧ್ಯಕ್ಷರು.—ನಾನು ಇದನ್ನು ಅಲೋ ಮಾಡುವುದಿಲ್ಲ. ನೀವು ಯಾರು ಏನು ಹೇಳಿದರೂ ಅದು ರೆಕಾರ್ಡ್‌ಗೆ ಹೋಗುವುದಿಲ್ಲ.

(ಗೊಂದಲ)

ಅಧ್ಯಕ್ಷರು.—ನಾನು ಹೇಳುವುದನ್ನು ಕೇಳಿ. ಅವರ ಪ್ರಿಲಿಮಿನರಿ ಸಬ್ಮಿಷನ್‌ಗೆ ೧೮-೧೫ ನಿಮಿಷ ಆಗುತ್ತದೆ ..

ಶ್ರೀ ಬಿ. ಲಕ್ಕಪ್ಪ.—ತಾವು ನನಗೆ ಅವಕಾಶವನ್ನು ಕೊಡಬೇಕು.

ಅಧ್ಯಕ್ಷರು.—ನಾನು ತಮಗೆ ಅವಕಾಶ ಕೊಡುವುದಿಲ್ಲ.

(ಗೊಂದಲ)

ಅಧ್ಯಕ್ಷರು.—ನಿಯಮ ೩೪೬ರ ಪ್ರಕಾರ ನಾನ್ ಡಿಸ್ಕಷನ್, ಹೌದೋ, ಅಲ್ಲವೋ ? ನಿನ್ನೆಯ ದಿವಸ ನಿಯಮ ೩೪೬ರ ಕೆಳಗೆ ಮಾನ್ಯ ಯಡಿಯೂರಪ್ಪನವರೂ ಒಂದು ನೋಟೀಸನ್ನು ತಂದು ಕೊಟ್ಟಿದ್ದಾರೆ, ಮಾನ್ಯ ಖಾರ್ಗೆಯವರೂ ಕೂಡ ಬಂದು ನೋಟೀಸನ್ನು ನಿಯಮ ೩೪೬ರ ಪ್ರಕಾರ ಕೊಟ್ಟಿದ್ದಾರೆ, ಇದರ ಬಗ್ಗೆ ಒಂದು ಸ್ಟೇಟ್‌ಮೆಂಟ್‌ನ್ನು ಮಾಡುವಂತೆ ನಾನು ಸಂಬಂಧಪಟ್ಟ ಮಾನ್ಯ ಮಂತ್ರಿಗಳಿಗೆ ಹೇಳಿದ್ದೇನೆ. ಆದರೆ ಇದು ಯೋಗ್ಯವಿಲ್ಲ, ಅರ್ಹತೆ ಇಲ್ಲ, ಇದು ಕೊಡುವಂಥಾದ್ದಲ್ಲ, ಆದ್ದರಿಂದ ಇದಕ್ಕೆ ನಿಯಮ ೩೪೬ರ ಪ್ರಕಾರ ಚರ್ಚೆಗೆ ಅವಕಾಶವನ್ನು ಕೊಡುವುದಕ್ಕಾಗುವುದಿಲ್ಲ. ಇದನ್ನು ಬೇರೆ ರೂಲ್ ಪ್ರಕಾರ ಚರ್ಚೆಗೆ ತರುವುದಾದರೆ ತನ್ನಿ.

(ಗೊಂದಲ)

ಶ್ರೀ ಬಿ. ಲಕ್ಕಪ್ಪ.—ಇದು ದೇಶದ ಭದ್ರತೆಯ ಪ್ರಶ್ನೆಯಾಗಿದೆ. ಇದರಲ್ಲಿ ಎರಡು ಸೂಟ್‌ಕೇಸ್‌ಗಳ ವಿಚಾರ ಇದೆ.....

(ಗೊಂದಲ)

ಅಧ್ಯಕ್ಷರು.—ನೀವು ಏನು ಹೇಳಿದರೂ ರೆಕಾರ್ಡ್‌ಗೆ ಹೋಗುವುದಿಲ್ಲ. ನಿಮಗೆ ನಿಯಮ ೩೪೬ರ ಪ್ರಕಾರ ನಾನು ಚರ್ಚೆಗೆ ಅವಕಾಶವನ್ನು ಕೊಟ್ಟಿಲ್ಲ, ಮತ್ತು ಕೊಡುವುದಿಲ್ಲ.

(ಗೊಂದಲ)

ಅಧ್ಯಕ್ಷರು.—ಪ್ರಿಲಿಮಿನರಿ ಸಬ್ಮಿಷನ್ ಮಾಡುವುದಕ್ಕೆ ನಾನು ಅವರಿಗೆ ಹೇಳಿದ್ದೇನೆ. ಅವರು ಮಾಡಲಿ.....

(ಗೊಂದಲ)

ಅಧ್ಯಕ್ಷರು.—ಇವತ್ತು ಬೆಳಿಗ್ಗೆ ನಾನು ರೂಲಿಂಗ್‌ನ್ನು ಕೊಟ್ಟಿದ್ದೇನೆ. ಅವರು ಅಡ್ಜರ್ನ್‌ಮೆಂಟ್ ಮೋಷನ್‌ನ್ನು ಇವತ್ತು ಬೆಳಿಗ್ಗೆ ತಂದಾಗ ನಾನು ಹೇಳಿದ್ದೇನೆ ಪ್ರಶ್ನೋತ್ತರ ಅವಧಿ ಆದಮೇಲೆ ಪ್ರಿಲಿಮಿನರಿ ಸಬ್ಮಿಷನ್‌ಗೆ ಅವಕಾಶ ಕೊಡುತ್ತೇನೆ ಎಂದು ಅವರು ಅಡ್ಜರ್ನ್‌ಮೆಂಟ್ ಮೋಷನ್ ಏನು ಕೊಟ್ಟಿದ್ದಾರೆ ಆದರ ಬಗ್ಗೆ ಅವರು ಪ್ರಿಲಿಮಿನರಿ ಸಬ್ಮಿಷನ್ ಮಾಡಲಿ. ಮಾನ್ಯ ಮೊಯ್ಲಿಯವರೇ ತಾವು ಬೆಳಿಗ್ಗೆ ಇದನ್ನು ಒಪ್ಪಿಕೊಂಡಿದ್ದೀರಿ.....

(ಗೊಂದಲ)

ಅಧ್ಯಕ್ಷರು.—ಪ್ರಿಲಿಮಿನರಿ ಸಬ್ಮಿಷನ್ ಮಾಡುವುದಕ್ಕೆ ನಾನು ಅವಕಾಶ ಕೊಡುವುದಿಲ್ಲ. ಏಕೆಂದರೆ ಹಿಂದೆ ಒಂದು ಇನ್ಸಿಕೆಂಟ್ ಆಗಿದೆ. ಹಿಂದೆ ಜನಾರ್ಧನ ಪೂಜಾರಿಯವರ ಮೇಲೆ ಒಂದು ಪ್ರಿವಿಲೇಜ್ ಮೋಷನ್ ಕೂಟ್ಟಾಗ ನೀವು ಹೇಳಿದಿರಿ, ಇದು ಆಗಬಾರದಿತ್ತು. ಆಗಿಹೋಗಿದೆ ಎಂದು ಪ್ರಿಲಿಮಿನರಿ ಸಬ್ಮಿಷನ್ ಮಾಡಿ ಎಂದು ನಾನು ಹೇಳಿದೆ. ಪ್ರಿಲಿಮಿನರಿ ಸಬ್ಮಿಷನ್ ಆದಮೇಲೆ ನಾನು ಏನು ಹೇಳಿದೆ, ಇದು ಈ ಸದನಕ್ಕೆ ಸಂಬಂಧಪಟ್ಟದ್ದಲ್ಲ, ಕೇಂದ್ರ ಸರ್ಕಾರಕ್ಕೆ ಸಂಬಂಧಪಟ್ಟದ್ದು ದು. ಏಕೆಂದರೆ ಅವರು ಕೇಂದ್ರಸರ್ಕಾರದ ಮಂತ್ರಿಗಳು. ಅವರ ಮೇಲೆ ಪ್ರಿವಿಲೇಜ್ ನೋಟಿಸ್ ಕೊಡುವುದಾದರೆ ನಾವು ಅಲ್ಲಿಗೆ ಹೋಗಬೇಕಾಗುತ್ತದೆಂದು ರೂಲಿಂಗ್‌ನ್ನು ರಿಸರ್ವ್ ಮಾಡಿ ಅದನ್ನು ಪಾರ್ಲಿಮೆಂಟ್‌ನ ಸ್ಪೀಕರ್‌ರವರಿಗೆ ರೆಫರ್ ಮಾಡಿದೆ. ಅವರು ಏನು ಮಾಡಿದರು, ಏನು ತೀರ್ಮಾನವನ್ನು ಕೊಟ್ಟರು ಎಂಬುದನ್ನು ನಾನು ಈ ಸದನಕ್ಕೆ ಓದಿ ಹೇಳಿದೆ.

SRI S. BANGARAPPA.—Having given the ruling in mr. Janardhana Poojari's matter, ಇದರ ಬಗ್ಗೆ ಪ್ರಿಲಿಮಿನರಿ ಸಬ್ಮಿಷನ್ ಮಾಡುವುದಿಲ್ಲ.

(ಗೊಂದಲ)

೪.೦೦ ಪಿ. ಎಂ.

ಶ್ರೀ ಎಂ. ರಘುಪತಿ.—ಇದು ದೇಶದ ಭದ್ರತೆಯ ಪ್ರಶ್ನೆ.

(ಗೊಂದಲ)

ಅಧ್ಯಕ್ಷರು.—ನಾನು ಏನು ಕೇಳುತ್ತೇನೆನ್ನುವುದನ್ನು ಸ್ವಲ್ಪ ಕೇಳಿ. ಪ್ರಿಲಿಮಿನರಿ ಸಬ್‌ಮಿಷನ್‌ಗೆ ಅವಕಾಶ ಕೊಟ್ಟಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ನನ್ನದೊಂದು ಪಾಯಿಂಟ್ ಆಫ್ ಆರ್ಡರ್ ಇದೆ.

ಅಧ್ಯಕ್ಷರು.—ನಾನು ಈಗಾಗಲೇ ಮಾನ್ಯ ಕೃಷ್ಣನ್‌ರವರಿಗೆ ಅವಕಾಶ ಕೊಟ್ಟಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ನನ್ನದು ಕೂಡ ಅದೇ ವಿಷಯದ ಮೇಲೆ ಪಾಯಿಂಟ್ ಆಫ್ ಆರ್ಡರ್ ಇದೆ. ಅದೇನೆಂದರೆ ನಿಯಮದ ಪ್ರಕಾರ ನಿಲುವಳಿಸೂಚನೆಗೆ ಅವಕಾಶ ಕೊಡುವುದಕ್ಕೆ ಬರುವುದಿಲ್ಲ. ಎನ್ನುವುದಾದರೆ, ಅವನ್ನು ತಾವು ತಮ್ಮ ಛೇಂಬರ್‌ನಲ್ಲಿಯೇ ರಿಜೆಕ್ಟ್ ಮಾಡಬೇಕಾಗಿತ್ತು.

ಅಧ್ಯಕ್ಷರು.—ನೀವು ಹೇಳಿದ ಪ್ರಕಾರ ಮಾಡುವುದಾದರೆ ೧೦೦ಕ್ಕೆ ೯೯ ಅಡ್ಜರ್ನ್‌ಮೆಂಟ್ ಮೋಷನ್‌ಗಳನ್ನು ನನ್ನ ಛೇಂಬರ್‌ನಲ್ಲಿಯೇ ರಿಜೆಕ್ಟ್ ಮಾಡಬೇಕಾಗುತ್ತದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ತಾವು ಲೊ ಕಸಭೆಯ ಸ್ಪೀಕರ್ ಅಲ್ಲ, ಇದು ಲೋಕಸಭೆಯಲ್ಲಿ. ಅದು ಈ ಸದನದ ಪರಿಮಿತಿಗೆ ಬರುವುದಿಲ್ಲ, ಅದು ಕೇಂದ್ರಸರ್ಕಾರಕ್ಕೆ ಸೀಮಿತವಾದ ವಿಚಾರ. ಕೇಂದ್ರದ ಪರವಾಗಿ ಉತ್ತರವನ್ನು ಕೊಡಲು ಇಲ್ಲಿ ಯಾರಿದ್ದಾರೆ ? ಯಾವ ಮಂತ್ರಿಗಳು ಉತ್ತರ ಕೊಡುತ್ತಾರೆ ? ಯಾರ ಮೇಲೆ ಜವಾಬ್ದಾರಿಯನ್ನು ಹೊರಿಸುತ್ತೀರಿ ?

(ಗೊಂದಲ)

ಶ್ರೀ ಎಂ. ಎಸ್. ಕೃಷ್ಣನ್.—ನಮಗೂ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಿ. ನಾವೂ ಕೂಡ ಈ ಮನೆಯ ಸದಸ್ಯರಾಗಿದ್ದೇವೆ. ಅವರಿಬ್ಬರೇ ಮಾನ್ಯ ಸದಸ್ಯರು ಮಾತನಾಡುತ್ತಿದ್ದರೆ ಅದರ ಅರ್ಥವೇನು ? ಮಾತನಾಡಲು ನಮಗೂ ಕೂಡ ಹಕ್ಕಿದೆ.

(ಗೊಂದಲ)

ಶ್ರೀ ಆರ್. ವೆಂಕಟರಾಮಯ್ಯ.—ನಮಗೂ ಅವಕಾಶವನ್ನು ಕೊಡಬೇಕು.

ಶ್ರೀ ಬಿ. ಎನ್. ಬಚ್ಚೇಗೌಡ.—ಮಾನ್ಯ ಕೃಷ್ಣನ್‌ರವರಿಗೆ ಅವಕಾಶ ಕೊಡಬೇಕು.

(ಈ ಸಂದರ್ಭದಲ್ಲಿ ಕಾಂಗ್ರೆಸ್ (ಐ) ಪಕ್ಷದ ಸದಸ್ಯರು ಘೋಷಣೆಕೂಗುತ್ತಾ ತಮ್ಮ ಆಸನಗಳನ್ನು ಬಿಟ್ಟು ಹೊರಬಂದು ಪ್ರತಿಭಟನೆ ಮಾಡಿದರು)

(ಗೊಂದಲ)

ಅಧ್ಯಕ್ಷರು.—ಈಗ ಯಾರು ಹೇಳುವುದೂ ಸಹ ರೆಕಾರ್ಡ್‌ಗೆ ಹೋಗುವುದಿಲ್ಲ. Don't record.

ಅಧ್ಯಕ್ಷರು.—ಈಗ ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು. ರೆಕಾರ್ಡಿಗೆ ಏನೂ ಹೋಗುವುದಿಲ್ಲ.

(ಗೊಂದಲ)

ಅಧ್ಯಕ್ಷರು. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ, ಅವರದ್ದೂ ಕೇಳುತ್ತೇನೆ, ಇವರದ್ದೂ ಕೇಳುತ್ತೇನೆ.

(ಉಭಯ ಪಕ್ಷಗಳ ಸದಸ್ಯರೆಲ್ಲರೂ ಎದ್ದು ನಿಂತು ಮಾತನಾಡುತ್ತಿದ್ದರು)

ಅಧ್ಯಕ್ಷರು. ದಯವಿಟ್ಟು ಎಲ್ಲರೂ ತಮ್ಮ ತಮ್ಮ ಸ್ಥಳಗಳಿಗೆ ಹೋಗಿ ಕುಳಿತುಕೊಳ್ಳಿ. (ಅಲ್ಲಲ್ಲೆ ಗುಂಪು ಗುಂಪಾಗಿ ನಿಂತು ಮಾತನಾಡುತ್ತಿದ್ದ ಸದಸ್ಯರನ್ನುದ್ದೇಶಿಸಿ)

(ಗೊಂದಲ)

ಅಧ್ಯಕ್ಷರು.—ಎಲ್ಲರೂ ತಮ್ಮ ತಮ್ಮ ಸ್ಥಳಗಳಿಗೆ ಹೋಗಿ.

ಶ್ರೀ ಎಂ. ವೀರಪ್ಪ ಮೊಯ್ಲಿ.—ನಾನು ಒಂದು ಕ್ರಿಯಾಲೋಪವನ್ನು ಎತ್ತುತ್ತೇನೆ. ಮಾನ್ಯ ಸದಸ್ಯರು ನಿಲುವಳಿ ಸೂಚನೆಯನ್ನು ಮೂವ್ ಮಾಡುವ ಬಗ್ಗೆ.....

(ಗೊಂದಲ)

ಅಧ್ಯಕ್ಷರು.—ನಿಮ್ಮ ನಿಮ್ಮ ಜಾಗಕ್ಕೆ ಹೋಗಿ. ದಯವಿಟ್ಟು ಎಲ್ಲರೂ ತಮ್ಮ ತಮ್ಮ ಸ್ಥಳಗಳಿಗೆ ಹೋಗಬೇಕು. ನೀವು ಯಾರು ಏನು ಮಾತನಾಡಿದರೂ ರೆಕಾರ್ಡಿಗೆ ಹೋಗುವುದಿಲ್ಲ.

(ಗೊಂದಲ)

ಅಧ್ಯಕ್ಷರು.—ಏನೂ ರೆಕಾರ್ಡ್ ಆಗುವುದಿಲ್ಲ. ದಯವಿಟ್ಟು ಎಲ್ಲರೂ ತಮ್ಮ ಸ್ಥಳಕ್ಕೆ ಹೋಗಿ. ಈಗ ನಾನು ಅವರಿಗೆ ಅವಕಾಶ ಕೊಟ್ಟಿದ್ದೇನೆ. ಏಕೆಂದರೆ ನಾನು ಅವರಿಗೆ ಬೆಳಿಗ್ಗೆಯೇ ಪ್ರಿಲಿಮಿನರಿ ಸಬ್‌ಮಿಷನ್‌ಗೆ ಅವಕಾಶ ಕೊಡುತ್ತೇನೆಂದು ಹೇಳಿದ್ದೇನೆ.

(ಗೊಂದಲ)

ಅಧ್ಯಕ್ಷರು.—ಯಾವುದೂ ರೆಕಾರ್ಡಿಗೆ ಹೋಗುವುದಿಲ್ಲ. Don't record.

(ಗೊಂದಲ)

ಅಧ್ಯಕ್ಷರು.—ದಯವಿಟ್ಟು ಎಲ್ಲರೂ ನಿಮ್ಮ ನಿಮ್ಮ ಸ್ಥಳಗಳಿಗೆ ಹೋಗಿ.

(ಗೊಂದಲ)

ಶ್ರೀ ಆರ್. ವೆಂಟರಾಮಯ್ಯ.—ಪ್ರಿಲಿಮಿನರಿ ಸಬ್‌ಮಿಷನ್‌ಗೆ ಅವಕಾಶ ಕೊಡಬೇಕು.

(ಗೊಂದಲ)

ಅಧ್ಯಕ್ಷರು.—ಯಾರು ಏನೇ ಮಾತನಾಡಿದರೂ ರೆಕಾರ್ಡ್‌ಗೆ ಹೋಗುವುದಿಲ್ಲ.

(ಗೊಂದಲ)

ಅಧ್ಯಕ್ಷರು.—ಈ ಬಗ್ಗೆ ನಾಗರತ್ನಮ್ಮನವರು, ಮುಖ್ಯಮಂತ್ರಿಗಳು ಏನು ಹೇಳುತ್ತಾರೋ ಹೇಳಲಿ.

(ಗೊಂದಲ)

ಅಧ್ಯಕ್ಷರು.—ಈಗ ಸಭೆಯನ್ನು ೧೫ ನಿಮಿಷ ಮುಂದೂಡಲಾಗಿದೆ.

(ಮಧ್ಯಾಹ್ನ ೪ ಗಂಟೆ ೧೨ ನಿಮಿಷಕ್ಕೆ ಸದನವು ಮುಕ್ತಾಯವಾಗಿ ೧೫ ನಿಮಿಷಗಳ ನಂತರ ಮತ್ತೆ ಸೇರಲು ನಿಶ್ಚಯಿಸಿತು.)

(ಸದನವು ಮತ್ತೆ ೫-೨೭ಕ್ಕೆ ಸಮಾವೇಶಗೊಂಡಿತು)

(ಅಧ್ಯಕ್ಷರು.—ಪೀಠವನ್ನಲಂಕರಿಸಿದರು)

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾಪನ್ಯ ಅಧ್ಯಕ್ಷರೆ.....

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಪಾಯಿಂಟ್ ಆಫ್ ಆರ್ಡರ್.

(ಗೊಂದಲ)

ಅಧ್ಯಕ್ಷರು.—ನಥಿಂಗ್ ವಿಲ್ ಗೋ ಆನ್ ರೆಕಾರ್ಡ್. ಎಲ್ಲರೂ ಕುಳಿತುಕೊಳ್ಳಬೇಕು.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ನಾವು ಹೇಳುವುದನ್ನು ಸ್ವಲ್ಪ ಕೇಳಬೇಕು.

ಅಧ್ಯಕ್ಷರು.—ದಯವಿಟ್ಟು ಎಲ್ಲರೂ ಕೂಡಬೇಕು.

ಶ್ರೀ ಎಸ್. ಬಂಗಾರಪ್ಪ.—ಕೂಡುತ್ತೇವೆ. ಆದರೆ ನಾವು ಹೇಳುವುದನ್ನು ಕೇಳಬೇಕು.

(ಗೊಂದಲ)

ಶ್ರೀ ಎಂ. ಎಸ್. ಕೃಷ್ಣನ್.—ನಮಗೆ ಮೊದಲು ಅವಕಾಶ ಮಾಡಿಕೊಡಿ. ಇಲ್ಲದಿದ್ದರೆ ಆಗುವುದಿಲ್ಲ. ಮೂರು ಜನರೂ ಸಹಿ ಮಾಡಿ ನೋಟೀಸ್ ಕೊಟ್ಟಿದ್ದೇವೆ. ಮೊದಲು ನಮಗೆ ಅವಕಾಶ ಮಾಡಿಕೊಡಬೇಕು. ಪ್ರಿವಿಲಿಜಸ್ ಸಬ್‌ಮಿಷನ್‌ಗೆ ಅವಕಾಶ ಮಾಡಿಕೊಡಬೇಕು.

(ಗೊಂದಲ)

ಅಧ್ಯಕ್ಷರು. ದಯವಿಟ್ಟು ಎಲ್ಲರೂ ಕೂತುಕೊಳ್ಳಬೇಕು. ಈಗ ಸಭೆ ಮುಂಕ್ತಾಯವಾಗಿ ನಾಳೆ ಬೆಳಿಗ್ಗೆ ೧೧–೦೦ ಗಂಟೆಗೆ ಮತ್ತೆ ಸೇರುವುದು.

(ಸದನವು ಸಂಜೆ ೫–೫ೆರಕ್ಕೆ ಮುಂತ್ತಾಯಗೊಂಡು ಮರುದಿನ ದಿನಾಂಕ ೩೦–೩–೮೯ರಂದು ಬೆಳಿಗ್ಗೆ ೧೧–೦೦ ಗಂಟೆಗೆ ಪುನಃ ಸಮಾವೇಶಗೊಳ್ಳಲು ತೀರ್ಮಾನಿಸಿತು)

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

(ಅಧ್ಯಕ್ಷರು ಆದೇಶವಿತ್ತಂತೆ ಯಾವುದನ್ನೂ ರೆಕಾರ್ಡ್‌ಮಾಡಲಿಲ್ಲ)